
ಪದಬಂಧ



ಎಡದಿಂದ ಬಲಕ್ಕೆ
1. ಸಂಪ್ರದಾಯವನ್ನು ಪಾಲಿಸಲು ತಕ್ಕಂತಹ ಮುಖಾಲಂಕಾರ ಸಾಮಗ್ರಿ 4
3. ಮೂರೆಣಿಸುವುದರೊಳಗೆ ನಡೆದುಹೋಯಿತು ಕೊಲೆ 3
4. ಗೋಡೆ ಹತ್ತಿದವನನ್ನು ಹೇಗೆ ಹೆದರಿಸಿತು ನೋಡಿ ಮಂಗ ಮುಂದಾಳು 3
6. ಯಾವ ವಿಚಾರವನ್ನೂ ಅರಿಯದವ ಕಾಡು ಪ್ರಾಣಿಯೇ ಸರಿ! 4
7. ವ್ಯಾಕುಲನಾದವನನ್ನು ರಂಜಿಸೀತೇ ಈ ಪದ್ಯ? 3
9. ಆಕೆ ಕಾಸಿನ ಸರವನ್ನು ಧರಿಸಿದಂತೆ ತೋರಿದ್ದು ನಿದ್ರಾ ಚಿತ್ರ 3
11. ಬಲಿತ ಹಲಸಿನ ಮರದಿಂದ ನಿರ್ಮಿಸಲಾದದ್ದು ಈ ತಾಳವಾದ್ಯ ಕೂಡ 3
13. ಕತ್ತಲಿನಲ್ಲೂ ಹೇಗೆ ಹೊಳೆಯುತ್ತಿದೆ ನೋಡಿ ಎಳ್ಳಿನಾಕಾರದ ಬೊಟ್ಟು! 3
15. 'ಮೆಣಸಿನ ರುಚಿಯನ್ನು ಹುಡುಕಿ ಹೊಕ್ಕ ಮನೆ' ಜೈಲು ತಾನೇ? 4
17. ಮುಂದೆ ನಿಂತವನ ಮನದ ತುಂಬ ಬರೀ ದುಃಖ 3
18. ತೇರೆಳೆವ ಕಾರ್ಯಕ್ಕೆ ಬರಲೇಬೇಕೆಂದು ಭಾರೀ ಒತ್ತಾಯ 3
19. ಬೆಳೆವ ಕಾಳೆಲ್ಲ ಕಳ್ಳರ ಪಾಲಾದೀತೆಂಬ ಆತಂಕ, ಚಿಂತೆ 4

ಮೇಲಿನಿಂದ ಕೆಳಕ್ಕೆ
1. ಪಡುವಣದ ಕಡೆಯಿಂದ ಕೇಳಿ ಬಂದ ಉಚ್ಚಾರ ಓಂಕಾರ ತಾನೇ? 3
2. ನಾರಿಯರಿಗೆ ಪ್ರಿಯವಾದದ್ದು ಹಳ್ಳಿಯಂತೂ ಅಲ್ಲ 3
3. ಮಾಧವನ ಧ್ವನಿ ಎಷ್ಟು ಮೃದು, ಕೋಮಲ ಅಲ್ಲವೇ? 3
5. ವಾಸ್ತವವನ್ನು ಬಿಂಬಿಸುವಂಥ ವಸ್ತ್ರ, ಉಡುಪು 3
7. ಗಾರೆ ಕಾರ್ಯದ ತಂತ್ರಗಳೆಲ್ಲ ಆತನಿಗೆ ಸಂಪೂರ್ಣ ಕೈ ವಶ 4
8. ನೌಕಾಬಲಕ್ಕೆ ಇದೀಗ 'ಹೊಸ ಸಮಯ' ಒದಗಿದೆ 4
9. ಮೂರ್ಖರ ಮತಿಯನ್ನೇ ಬದಲಿಸುವ ಕೈಚಳಕ ಇದು 4
10. ಜಲ ಶುದ್ಧೀಕರಣದ ತಂತ್ರಗಳನ್ನೆಲ್ಲ ಉತ್ತಮಗೊಳಿಸಿದವ ಈತನೇ 4
12. ಬಡಾಯಿ ಕೊಚ್ಚಿದವರ ಊರಿನಲ್ಲಿ ಎಲ್ಲವೂ ನಿಸ್ಸಾರ, ನೀರಸ 3
14. ಆತ ಕಲಿಸಿದ ಕೆಲಸಗಳೆಲ್ಲ ಕಲಾಮಯ, ಸುಂದರ 3
15. ಕಾಲಿನ ಅಲಂಕರಣಕ್ಕೂ ಚಿನ್ನದಿಂದ ಮಾಡಿದ್ದೇ ಆಗಬೇಕೇ? 3
16. ಹಾಳಾಗುವ ಭಯದಲ್ಲಿದೆ 'ಸಾಗರ ರತ್ನ' 3

---

## 27—01—2022 ಉತ್ತರಗಳು

ಎಡದಿಂದ ಬಲಕ್ಕೆ
1. ಅಲೌಕಿಕ 3. ಆರಾಮ 4. ರಮಣ 6. ರಕ್ಷಾಪುಟ 7. ಅರುಂಧತಿ 8. ಅಹರ್ನಿಶಿ 10. ಸದಾಶಯ 12. ತಿರುಮಲೆ 14. ಅಂಧಕಾರ 16. ನಸೀಬು 17. ಹರಡು 18. ಜಲಸಸ್ಯ

ಮೇಲಿನಿಂದ ಕೆಳಕ್ಕೆ
1. ಅಮರ 2. ಕರಟ 3. ಆರಾಧಕ 5. ಣರಹ (ಹರಣ ತಲೆಕೆಳಗು) 7. ಅನಾಯಾಸ 9. ಶಿಲಾಬಾಲೆ 11. ಶಮನ 13. ಕರುನಾಡು 14. ಅಂಬುಜ 15. ರಹಸ್ಯ


ಪ್ರಶ್ನಾಂಕಣ

# ಆಲ್ಪ್ಸ್: ಏನು ವಿಶೇಷ?

ಆಲ್ಪ್ಸ್. ಅದು ವಿಶ್ವಪ್ರಸಿದ್ಧವಾಗಿರುವ ಒಂದು ಪರ್ವತ ಪಂಕ್ತಿ. ಧರೆಯ ಸುದೀರ್ಘ ಪರ್ವತ ಸಾಲುಗಳ ಪಟ್ಟಿಯಲ್ಲಿ ಅದರದು 30 ನೆಯ ಸ್ಥಾನವಾದರೂ ಸುಂದರ ನಿಸರ್ಗ ದೃಶ್ಯಗಳಲ್ಲಿ ಅದರದು ಅಗ್ರ ಪಂಕ್ತಿ.

ಆಲ್ಪ್ಸ್ ಯೂರೋಪ್ ಖಂಡದ ಅತ್ಯಂತ ಉದ್ದದ ಪರ್ವತ ಸ್ತೋಮ. ಯೂರೋಪ್ ನ ಎಂಟು ದೇಶಗಳಲ್ಲಿ ಹಬ್ಬಿರುವ ಈ ಪರ್ವತದ ಒಟ್ಟು ಉದ್ದ 1200 ಕಿಲೋ ಮೀಟರ್. ಅದರ ಅಗಲ 130 ರಿಂದ 225 ಕಿಲೋ ಮೀಟರ್. ಆಲ್ಪ್ಸ್ ಪರ್ವತ ಪ್ರದೇಶದ ಒಟ್ಟು ವಿಸ್ತೀರ್ಣ ಸುಮಾರು 207000 ಚದರ ಕಿಲೋ ಮೀಟರ್. ಈ ಪರ್ವತ ಪ್ರದೇಶದ ಗರಿಷ್ಠ ಭಾಗ 'ಆಸ್ಟ್ರಿಯಾ' ದೇಶದಲ್ಲಿದೆ (ಶೇ.28.7) ಆದರೆ, ಈ ಪರ್ವತ ಸ್ತೋಮದ ಪರಮ ಸುಂದರ ತಾಣಗಳೆಲ್ಲ 'ಸ್ವಿಟ್ಜರ್ಲೆಂಡ್'ನಲ್ಲಿ ಹರಡಿವೆ. ಈಗ್ಗೆ 770 ದಶಲಕ್ಷ ವರ್ಷ ಹಿಂದೆ ಪೃಥ್ವಿಯಲ್ಲಿ ಸಂಭವಿಸಿದ ಭೂ ಖಂಡಗಳ ನಡುವಣ ಘರ್ಷಣೆಯ ಒಂದು ಮಹಾ ತುಮುಲದಲ್ಲಿ ಅವತರಿಸಿದ ಆಲ್ಪ್ಸ್ ಪರ್ವತ ಶ್ರೇಣಿ ಆಗಿನಿಂದ ನಿಧಾನವಾಗಿ ಉನ್ನತಿಗೊಳ್ಳುತ್ತ ಪ್ರಸ್ತುತ ಸಾಗರ ಮಟ್ಟದಿಂದ ಗರಿಷ್ಠ 4800 ಮೀಟರ್ (15,770 ಅಡಿ) ಎತ್ತರ ತಲುಪಿದೆ.

ಆಲ್ಪ್ಸ್ ವಿಶೇಷಗಳು ಅಷ್ಟೇ ಅಲ್ಲ. ಕಣ್ಮನ ಸೂರೆಗೊಳ್ಳುವ ಅತ್ಯದ್ಭುತ ಸ್ವರ್ಗೀಯ ಸೊಬಗಿನ ನಿಸರ್ಗ ದೃಶ್ಯಗಳಿಗೆ ಈ ಪರ್ವತ ಅತ್ಯಂತ ಪ್ರಸಿದ್ಧ. ಹಿಮ ನದಿಗಳು (ಚಿತ್ರ2, 3 ), ಪರ್ವತ ಶಿಖರಗಳು, ಜಲಪಾತಗಳು, ಕಣಿವೆಗಳು, ಪ್ರಪಾತಗಳು ಮತ್ತು ಚಾರಣ ಮಾರ್ಗಗಳು ಅಲ್ಲಿ ಹೇರಳ. ಮಾನ್ ಬ್ಲಾನ್ (**Mont Blanc**) ಮತ್ತು ಮ್ಯಾಟರ್ ಹಾರ್ನ್ (ಚಿತ್ರ1 ) ಶಿಖರಗಳೂ ಸೇರಿದಂತೆ ಇದರಲ್ಲಿ 4000 ಮೀಟರ್ ಉನ್ನತಿ ಮೀರಿದ 100ಕ್ಕೂ ಹೆಚ್ಚು ಶಿಖರಗಳಿವೆ. ಸಾಗರ ಮಟ್ಟದಿಂದ 2730 ಮೀಟರ್ (9000 ಅಡಿ) ಮೀರಿದ ಈ ಪರ್ವತದ ಪ್ರದೇಶಗಳೆಲ್ಲ ಶಾಶ್ವತ ಹಿಮದಿಂದ ಆವೃತವಾಗಿವೆ. ಸುಮಾರು 30,000 ಪ್ರಾಣಿ ಪ್ರಭೇದಗಳು ಈ ಪರ್ವತ ಪ್ರದೇಶದಲ್ಲಿ ನೆಲೆಸಿವೆ.



ಯೂರೋಪ್ ಖಂಡದ ಶೇ.11 ಭಾಗ ವಿಸ್ತೀರ್ಣವನ್ನು ಆಲ್ಪ್ಸ್ ಆವರಿಸಿದೆ. ಆದರೆ ಇಡೀ ಯೂರೋಪ್ ಖಂಡದ ಎಲ್ಲ ನದಿ, ಸರೋವರಗಳ ನೀರಿನ ಶೇ.90 ಭಾಗ ಆಲ್ಪ್ಸ್ ಹಿಮ ನದಿಗಳಿಂದಲೇ ಒದಗುತ್ತಿದೆ. ಜಗದಾದ್ಯಂತ ಚಾರಣ ಪ್ರಿಯರಿಗೂ, ನಿಸರ್ಗ ಪ್ರೇಮಿಗಳಿಗೂ, ಪರ್ವತಾರೋಹೀ ಸಾಹಸಿಗರಿಗೂ ಆಲ್ಪ್ಸ್ ಪರಮ ಪ್ರಿಯ ತಾಣ. ಹಾಗಾಗಿಯೇ ಪ್ರತಿ ವರ್ಷ ಸರಾಸರಿ 12 ಕೋಟಿ ಆಸಕ್ತರು ಆಲ್ಪ್ಸ್ ಪ್ರವಾಸ ಕೈಗೊಳ್ಳುತ್ತಾರೆ.

■ ಎನ್. ವಾಸುದೇವ್